**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಖಾಸಗಿ ವಿಶ್ವವಿದ್ಯಾಲಯಗಳು ಉತ್ತಮ ಹಾಗೂ ಪಾರದರ್ಶಕ ಆಡಳಿತವನ್ನು ರೂಪಿಸುವ ಕುರಿತು.

********

**ಪ್ರಸ್ತಾವನೆ:-**

ಸನ್ನಿವೇಶಗಳಿಗೆ ಅನುಗುಣವಾಗಿ ಅಥವಾ ಸಂದರ್ಭಾನುಸಾರವಾಗಿ ಪಾರದರ್ಶಕ ಆಡಳಿತವನ್ನು ರೂಪಿಸುವ ಹಾಗೂ ಸಾರ್ವಜನಿಕ ಹಿತದೃಷ್ಟಿ ಅಥವಾ ಸಮರ್ಪಕ ವ್ಯವಸ್ಥಾಪನೆ/ಆಡಳಿತ ರೂಪಿಸುವ ಹಿತದೃಷ್ಟಿಯಿಂದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಖಾಸಗಿ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಕಡ್ಡಾಯ ಪ್ರಕಟಣೆಗಳನ್ನು ವಿಶ್ವವಿದ್ಯಾಲಯಗಳ ಅಧಿಕೃತ ಜಾಲತಾಣಗಳಲ್ಲಿ ಅಳವಡಿಸಿ ಪ್ರಕಟಿಸುವುದು ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಉತ್ತಮ ಆಡಳಿತದ ವ್ಯವಸ್ಥೆಯನ್ನು/ರೂಢಿಯನ್ನು ಅಳವಡಿಸಿಕೊಳ್ಳುವುದು ಯುಕ್ತವೆಂದು ತೀರ್ಮಾನಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ/2022, ಬೆಂಗಳೂರು, ದಿನಾಂಕ: 06-03-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಖಾಸಗಿ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ, ಕಡ್ಡಾಯ ಪ್ರಕಟಣೆಗಳನ್ನು ಹಾಗೂ ಸಾರ್ವಜನಿಕರಿಗೆ ಅಗತ್ಯವಾಗುವ ಮಾಹಿತಿಗಳನ್ನು ಆಯಾ ವಿಶ್ವವಿದ್ಯಾಲಯಗಳ ಅಧಿಕೃತ ಜಾಲತಾಣಗಳಲ್ಲಿ ಅಳವಡಿಸಿ ಪ್ರಕಟಿಸುವ ಬಗ್ಗೆ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ಉತ್ತಮ ಆಡಳಿತದ ವ್ಯವಸ್ಥೆಯನ್ನು/ರೂಢಿಯನ್ನು ಅಳವಡಿಸಿಕೊಳ್ಳುವ ಕುರಿತಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಖಾಸಗಿ ವಿಶ್ವವಿದ್ಯಾಲಯಗಳಿಗೆ ನಿರ್ದೇಶನವನ್ನು ನೀಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ಗೊತ್ತುಪಡಿಸಲಾಗಿರುವ ಆಯಾ ಅಧಿನಿಯಮದಲ್ಲಿನ ಪ್ರಕರಣಗಳಡಿ ಈ ಆದೇಶವನ್ನು ಹೊರಡಿಸಲಾಗಿದೆ. ಆದುದರಿಂದ, ಈ ಆದೇಶದಲ್ಲಿನ ನಿರ್ದೇಶನಗಳನ್ನು ಖಾಸಗಿ ವಿಶ್ವವಿದ್ಯಾಲಯಗಳು ಚಾಚೂ ತಪ್ಪದೇ ಪಾಲಿಸತಕ್ಕದ್ದು. ಒಂದುವೇಳೆ ಸರ್ಕಾರದ ಆದೇಶದನ್ವಯ ಕ್ರಮ ಕೈಗೊಳ್ಳದಿದ್ದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

**ಭಾಗ-01**

ಈ ಕೆಳಗಿನ ಪ್ರಕಟಣೆಗಳನ್ನು ಖಾಸಗಿ ವಿಶ್ವವಿದ್ಯಾಲಯಗಳ ಅಧಿಕೃತ ಜಾಲತಾಣಗಳಲ್ಲಿ 31/03/2023 ರೊಳಗೆ ಆಯಾ ಕುಲಪತಿಗಳ ನೇತೃತ್ವದಲ್ಲಿ ಕಡ್ಡಾಯವಾಗಿ ಪ್ರಕಟಿಸತಕ್ಕದ್ದು ಮತ್ತು ಇದರ ಅನುಪಾಲನಾ ಪ್ರಕ್ರಿಯೆಯನ್ನು ಏಪ್ರಿಲ್-2023 ರಿಂದ ಉನ್ನತ ಶಿಕ್ಷಣ ಇಲಾಖೆಯಲ್ಲಿ ಪರಿಶೀಲಿಸತಕ್ಕದ್ದು

1. ಯುಜಿಸಿ ಮಾರ್ಗಸೂಚಿಗಳು ಹಾಗೂ ಮಾನದಂಡಗಳಿಗೆ ಅನುಗುಣವಾದ ಹಾಗೂ ಪ್ರಬಂಧಕ ಮಂಡಳಿಯಿಂದ ಅನುಮೋದನೆಗೊಂಡ ಎಲ್ಲಾ ಪರಿನಿಯಮಗಳು.
2. ದಿನಾಂಕವಾರು ವಿವರಗಳ ಜೊತೆಗೆ ಸಂಪೂರ್ಣ ಮಾಹಿತಿಯನ್ನೊಳಗೊಂಡ ಕಾಲಾನುಕ್ರಮದ ವಾರ್ಷಿಕ ಆಯವ್ಯಯಗಳ ಎಲ್ಲಾ ದಾಖಲೆಗಳು.

-2

3. ಕಾಲಾನುಕ್ರಮದಲ್ಲಿನ ಎಲ್ಲಾ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಗಳು.
4. ಪ್ರಬಂಧಕ ಮಂಡಳಿ, ವ್ಯವಸ್ಥಾಪನಾ ಮಂಡಳಿ, ಶೈಕ್ಷಣಿಕ ಪರಿಷತ್ತು, ಸಂಶೋಧನಾ ಮತ್ತು ಅನ್ವೇಷಣಾ ಪರಿಷತ್ತು ಹಾಗೂ ಹಣಕಾಸು ಸಮಿತಿಗಳ ರಚನೆ, ಈ ಪ್ರಾಧಿಕಾರಗಳ ಪಾತ್ರ ಹಾಗೂ ಹೊಣೆಗಾರಿಕೆಗಳು, ಸದಸ್ಯರ ವಿವರಗಳು ಹಾಗೂ ಈ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿ ಮತ್ತು ನಡವಳಿಗಳು(ಪಿಡಿಎಫ್ ವಿನ್ಯಾಸದಲ್ಲಿ)).
5. ವಿಶ್ವವಿದ್ಯಾಲಯದ ಎಲ್ಲಾ ಸ್ಥಿರಾಸ್ತಿಗಳ ವಿವರಗಳು.
6. ವಿಶ್ವವಿದ್ಯಾಲಯದ ಎಲ್ಲಾ ಚರಾಸ್ತಿಗಳ ಅಧ್ಯಯನ ವಿಭಾಗವಾರು ವಿವರಗಳು.
7. ಬ್ಯಾಂಕ್ ಖಾತೆಗಳ ವಿವರಗಳು, ಬ್ಯಾಂಕ್ ಖಾತೆಗಳ ಆರಂಭ ಮತ್ತು ನಿರ್ವಹಣೆಯ ಉದ್ದೇಶಗಳು ಹಾಗೂ ಬ್ಯಾಂಕ್ ಶಿಲ್ಕುಗಳ ಬಗ್ಗೆ ಮಾಹೆವಾರು ಅದ್ಯತನಗೊಳಿಸುವುದು.
8. ಮಾಸಿಕ ಆದಾಯ ಹಾಗೂ ವೆಚ್ಚದ ನಿರೂಪಣೆಗಳು.
9. 2022-23ನೇ ಸಾಲಿನಲ್ಲಿ ಕೈಗೊಳ್ಳಲಾದ ಸಂಗ್ರಹಣೆಗಳು ಹಾಗೂ ಖರೀದಿಗಳ ಆದೇಶಗಳು, ಟೆಂಡರ್‌ಗಳು.
10. ಮುಂದುವರಿದ ಭೌತಿಕ ಮೂಲಸೌಕರ್ಯ ಯೋಜನೆಗಳು.
11. ಸ್ಥಾಪನೆ ವರ್ಷ ಹಾಗೂ ಮೂಲ ಉದ್ದೇಶಗಳ ಮಾಹಿತಿಯೊಂದಿಗೆ ವಿಶ್ವವಿದ್ಯಾಲಯ ಅಧ್ಯಯನ ವಿಭಾಗ/ ಘಟಕ ಕಾಲೇಜುಗಳು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳ ವಿವರಗಳು; ಇವುಗಳಲ್ಲಿ ನಡೆಸಲಾಗುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳು/ಕೋರ್ಸುಗಳು; ವಿದ್ಯಾರ್ಹತೆ ಮತ್ತು ವೃತ್ತಿ ಅನುಭವಗಳ ವಿವರಗಳನ್ನೊಳಗೊಂಡಂತೆ ಬೋಧಕ ಸಿಬ್ಬಂದಿಯ ವ್ಯಕ್ತಿ ಚಿತ್ರಣ ಹಾಗೂ ಅವರ ಆಸಕ್ತಿಗಳು, ಅವರಿಂದ ಕೈಗೊಳ್ಳಲಾದ ಸಂಶೋಧನೆ, ಅವರ ಪ್ರಕಟಣೆಗಳು ಮತ್ತು ಅವರ ಸಂಪರ್ಕದ ವಿವರಗಳು;
12. ಪಾತ್ರ ಹಾಗೂ ಹೊಣೆಗಾರಿಕೆಯ ವಿವರಗಳೊಂದಿಗೆ ಬೋಧಕೇತರ ಸಿಬ್ಬಂದಿಯ ಸಂಪೂರ್ಣ ಮಾಹಿತಿ;
13. ಕಾರ್ಯಕ್ರಮಗಳ ಶೀರ್ಷಿಕೆ, ಗುರುತಿಸುವಿಕೆ, ಶುಲ್ಕ ವಿನ್ಯಾಸ, ಕೋರ್ಸ್‌ಗಳ ಪಠ್ಯಕ್ರಮ, 2022-2023ನೇ ಸಾಲಿನ ಅನುಮೋದಿತ ವಿದ್ಯಾರ್ಥಿ ಪ್ರಮಾಣ ಮತ್ತು ಪ್ರವೇಶ ಪಡೆದ ವಿದ್ಯಾರ್ಥಿ ಪ್ರಮಾಣ ವಿಶ್ವವಿದ್ಯಾಲಯಗಳು ನಡೆಸುವ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳು, ಇದೇ ರೀತಿಯ ಮಾಹಿತಿಯನ್ನು ಅದರ ಎಲ್ಲಾ ಘಟಕ ಕಾಲೇಜುಗಳು, ಹೆಚ್ಚುವರಿ ಕ್ಯಾಂಪಸ್‌ಗಳು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಬಹಿರಂಗಪಡಿಸಬೇಕು (ಒಂದು ವೇಳೆ ಇವುಗಳಿಗೆ ಯಾವುದೇ ವೆಬ್‌ಸೈಟ್ ಇಲ್ಲದಿದ್ದರೆ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೇ ಒಂದು ಟ್ಯಾಬ್ ನಡಿಯಲ್ಲಿ ಮಾಡಬಹುದು). ಕಳೆದ ಐದು ವರ್ಷಗಳ ಶೈಕ್ಷಣಿಕ ಕಾರ್ಯಕ್ರಮಗಳ ಸೆಮಿಸ್ಟರ್‌ವಾರು ಫಲಿತಾಂಶಗಳ ವಿವರಗಳು.
14. ಸೆಮಿಸ್ಟರ್‌ವಾರು ತರಗತಿಗಳ ವೇಳಾಪಟ್ಟಿ ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಕಾರ್ಯ ಹಂಚಿಕೆ ವಿವರಗಳು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ದಿನಾಂಕವಾರು ಅನುಸೂಚನೆ/ವೇಳಾಪಟ್ಟಿ.
15. ಸೆಮಿಸ್ಟರ್‌ವಾರು ಪರೀಕ್ಷಾ ವೇಳಾಪಟ್ಟಿ, ಪರೀಕ್ಷಾ ಶುಲ್ಕದ ವಿವರಗಳು ಹಾಗೂ ಪರೀಕ್ಷಾ ಪ್ರಕ್ರಿಯೆಯ ಹಂತಗಳ ಹಾಗೂ ಒಟ್ಟಾರೆ ಅವದಿಯ ಮಾಹಿತಿ.
16. ಸಂಶೋಧನಾ ಕೇಂದ್ರಗಳು ಸೇರಿದಂತೆ ಯೋಜನೆಗಳು, ಪ್ರಕಟಣೆಗಳು, ಶಾಶ್ವತ ಶಾಸನಬದ್ಧ ದತ್ತಿ ನಿಧಿ, ವಿಶ್ವವಿದ್ಯಾಲಯದ ದತ್ತಿ ನಿಧಿ, ಸಾಮಾನ್ಯ ನಿಧಿ, ಅಭಿವೃದ್ಧಿ ನಿಧಿಗಳು, ಜರ್ನಲ್‌ಗಳು ಮತ್ತು ಉದ್ಯಮ ಪ್ರಾಯೋಜಿತ ಸಂಶೋಧನೆಯ ವಿವರಗಳು.
17. ಗ್ರಂಥಸೂಚಿ(Catalogue), ಡೇಟಾಬೇಸ್ (ದತ್ತ ಸಂಚಯ) ನೊಂದಿಗೆ ಚಂದಾದಾರರಾಗಿರುವ ಎಲ್ಲಾ ಜರ್ನಲ್‌ಗಳ ಹೆಸರುಗಳು, ಡಿಜಿಟಲ್ ಸಂಪುಟಗಳನ್ನು ಒಳಗೊಂಡಂತೆ ಎಲ್ಲಾ ಸಂಪುಟಗಳು, ವಿಶ್ವವಿದ್ಯಾಲಯದ ಜರ್ನಲ್‌ಗಳು,

ವಿಶ್ವವಿದ್ಯಾನಿಲಯದ ಪ್ರಕಟಣೆಗಳು, ವಿಶ್ವವಿದ್ಯಾಲಯದ ಬೋಧಕರ ಪ್ರಕಟಣೆಗಳು, ವಿಶ್ವವಿದ್ಯಾಲಯದ ಪ್ರಶ್ನೆ ಪತ್ರಿಕೆಗಳು ಮತ್ತು ಪತ್ರಾಗಾರಗಳು. ಗ್ರಂಥಾಲಯದ ಸಮಯ, ಅಲ್ಲಿನ ಸೇವೆಗಳು, ಗ್ರಂಥಾಲಯದಲ್ಲಿ ಲಭ್ಯವಿರುವ ಫೋಟೋಕಾಪಿ, ಮುದ್ರಣ, ಸ್ಕ್ಯಾನ್, ವಿತರಣೆ, ತಾಂತ್ರಿಕ ಸಹಾಯ, ರೆಫರಲ್ ಸೇವೆ / ಸಂಶೋಧನಾ ಸಹಾಯದಂತಹ ವಿವರಗಳು.

18. ವಾರ್ಷಿಕ ರಜಾದಿನಗಳ ಸೂಚಿಪಟ್ಟಿ.
19. ಪ್ಲೇಸ್‌ಮೆಂಟ್ ಸೆಲ್‌ಗಳ ವಿವರಗಳು ಮತ್ತು ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಉದ್ಯೋಗದ ವಿವರಗಳು.
20. ಹಳೆಯ ವಿದ್ಯಾರ್ಥಿಗಳ ಸಂಪರ್ಕ ಮತ್ತು ವಿಶ್ವವಿದ್ಯಾನಿಲಯದಿಂದ ಪ್ರಾರಂಭಿಸಿದ ಹಳೆಯ ವಿದ್ಯಾರ್ಥಿಗಳ ಸಂಘದ ವಿವರಗಳು ಮತ್ತು ಅದರ ಸದಸ್ಯತ್ವದ ವಿವರಗಳು.
21. ಯೋಜನೆಗಳು, ಇಂಟರ್ನ್‌ಶಿಪ್‌ಗಳು ಮತ್ತು ವಿದ್ಯಾರ್ಥಿ ಮಾರ್ಗದರ್ಶನ ಕಾರ್ಯಕ್ರಮ, ಇಂಟರ್‌ಶಿಪ್ / ಅಪ್ರೆಂಟಿಸ್‌ಶಿಪ್ ಎಂಬೆಡೆಡ್ ಪದವಿ ಕಾರ್ಯಕ್ರಮಗಳ ವಿವರಗಳು.
22. ಪಿಎಚ್‌ಡಿ ಪ್ರವೇಶಗಳು, ವಿದ್ಯಾರ್ಥಿ ಪ್ರಮಾಣ ಸಂಖ್ಯೆ ಹಾಗೂ ಪ್ರಸ್ತುತ ಪಿಎಚ್‌ಡಿ ಹೊಂದಿದವರ ವಿವರಗಳ ಜೊತೆಗೆ ಸಂಶೋಧನಾ ವಿವರಗಳು ಮತ್ತು ನಿಯೋಜಿಸಲಾದ ಕೆಲಸ.
23. ವಿದ್ಯಾರ್ಥಿಗಳಿಗಿರುವ ಅಂತರಾಷ್ಟ್ರೀಯ ಕೋಶದ ವಿವರಗಳು.
24. ಆವಿಷ್ಕಾರ ಕೇಂದ್ರದ ವಿವರಗಳು.
25. ವಿಶ್ವವಿದ್ಯಾನಿಲಯದಿಂದ ಜಾರಿಗೊಳಿಸಲಾದ ಕಲ್ಯಾಣ ಕಾರ್ಯಕ್ರಮಗಳು, ವಿದ್ಯಾರ್ಥಿ ವೇತನಗಳು, ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯಗಳು ಇತ್ಯಾದಿಗಳ ವಿವರಗಳು.
26. ವಿದ್ಯಾರ್ಥಿ ಕುಂದುಕೊರತೆ ಕೋಶದ ವಿವರಗಳು.
27. ಆನ್‌ಲೈನ್ ಮತ್ತು ಡಿಜಿಟಲ್ ಕಾರ್ಯಕ್ರಮಗಳ ವಿವರಗಳು.
28. ಸಹಿ ಮಾಡಲಾದ ಎಲ್ಲಾ ಎಂ.ಒ.ಯು ಗಳ ವಿವರಗಳು (ಪಿಡಿಎಫ್ ವಿನ್ಯಾಸದಲ್ಲಿ).

**ಭಾಗ-02**

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಪಾರದರ್ಶಕತೆ ಮತ್ತು ಉತ್ತಮ ಆಡಳಿತವನ್ನು ಉತ್ತೇಜಿಸಲು ಮಾರ್ಚ್-2023 ರಿಂದ ಕುಲಪತಿಗಳ ನೇತೃತ್ವದಲ್ಲಿ ಈ ಕೆಳಕಂಡ ಉತ್ತಮ ಆಡಳಿತ ಪದ್ಧತಿಗಳು/ಉಪಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು.

a. ವಿಶ್ವವಿದ್ಯಾಲಯದ ಪ್ರಬಂಧಕ ಮಂಡಳಿ, ವ್ಯವಸ್ಥಾಪನಾ ಮಂಡಳಿ, ಶೈಕ್ಷಣಿಕ ಪರಿಷತ್ತು, ಸಂಶೋಧನಾ ಮತ್ತು ಅನ್ವೇಷಣಾ ಪರಿಷತ್ತು ಹಾಗೂ ಹಣಕಾಸು ಸಮಿತಿ ಸಭೆಗಳನ್ನು ಯುಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ನೇರಪ್ರಸಾರ ಮಾಡಲು ಹಾಗೂ ಆಯಾ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ನೇರಪ್ರಸಾರ ಮಾಡಲು ತಕ್ಷಣದ ಕ್ರಮಕೈಗೊಳ್ಳುವುದು.
b. ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯಗಳು ಡಿಸೆಂಬರ್ ಅಂತ್ಯದ ವೇಳೆಗೆ ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹಾಗೂ ಈ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮಾರ್ಗದರ್ಶನ, ಮೇಲ್ವಿಚಾರಣೆ ಮತ್ತು ಸಹಾಯವನ್ನು ನೀಡತಕ್ಕದ್ದು.
c. ಅರ್ಹ ವಿಶ್ವವಿದ್ಯಾನಿಲಯಗಳು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾರ್ಗದರ್ಶನದ ಮೇರೆಗೆ ಆನ್‌ಲೈನ್ ಡಿಜಿಟಲ್ ಕಲಿಕೆ ಮತ್ತು ಆನ್‌ಲೈನ್ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳುವುದು. ಹಾಗೂ ಮಾರ್ಚ್ ಅಂತ್ಯದ ವೇಳೆಗೆ ಪ್ರತಿ ವಿಶ್ವವಿದ್ಯಾನಿಲಯವು ಸ್ನಾತಕ ಕಾರ್ಯಕ್ರಮಗಳಲ್ಲಿ ಕನಿಷ್ಠ ಒಂದು ಕೋರ್ಸ್ ಅನ್ನು ಪ್ರಾರಂಭಿಸಲು ಕ್ರಮಕೈಗೊಳ್ಳತಕ್ಕದ್ದು.

d. ಪ್ರತಿ ವಿಶ್ವವಿದ್ಯಾನಿಲಯವು ತನ್ನ ವೆಬ್‌ಸೈಟ್‌ನಲ್ಲಿ ಹಳೆಯ ವಿದ್ಯಾರ್ಥಿಗಳ ಪೋರ್ಟಲ್ ಅನ್ನು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಪರ್ಕ ಕಛೇರಿಯನ್ನು ಜನವರಿ 2023 ರ ಅಂತ್ಯದ ವೇಳೆಗೆ ಪ್ರಾರಂಭಿಸತಕ್ಕದ್ದು. ಹಾಗೂ ಹಳೆಯ ವಿದ್ಯಾರ್ಥಿಗಳ ಸಂಪರ್ಕ ಕಛೇರಿಯ ಕಾರ್ಯವಿಧಾನಗಳು, ಪ್ರಕಾರ್ಯಗಳು ಮತ್ತು ಕಾರ್ಯವ್ಯಾಪ್ತಿಯ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮೇಲ್ವಿಚಾರಣೆ ನಡೆಸತಕ್ಕದ್ದು.

e. ಪ್ರತಿ ವಿಶ್ವವಿದ್ಯಾನಿಲಯವು ತನ್ನ ಅಗ್ರ 05 ಅತಿ ಹೆಚ್ಚು ದಾಖಲಾತಿಯನ್ನು ಹೊಂದಿದ ಕೋರ್ಸ್‌ಗಳಿಗೆ ಡಿಸೆಂಬರ್‌ನಲ್ಲಿ ಔಟ್‌ರೀಚ್ ಕಾರ್ಯಕ್ರಮಗಳನ್ನು ಆಯೋಜಿಸತಕ್ಕದ್ದು ಹಾಗೂ ಅದರ ವಿದ್ಯಾರ್ಥಿಗಳಿಗೆ ಇಂಟರ್‌ಶಿಪ್ / ಸಂಶೋಧನೆ / ಉದ್ಯಮಶೀಲತೆ / ಉದ್ಯೋಗಕ್ಕಾಗಿ ಎಂ.ಒ.ಯು ಗಳನ್ನು ಮಾಡಿಕೊಳ್ಳಲು ಉದ್ಯಮ ಸಂಸ್ಥೆಗಳು ಮತ್ತು ಸ್ಥಳೀಯ ಕೈಗಾರಿಕೆಗಳೊಂದಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳತಕ್ಕದ್ದು. ಈ ಮುಂದಿನ ಮೂರು ತಿಂಗಳಲ್ಲಿ ವಿಶ್ವವಿದ್ಯಾನಿಲಯಗಳು ಅಂತಹ ಕನಿಷ್ಠ ಐದು ಉದ್ಯಮ ಸಂಸ್ಥೆಗಳು / ಕೈಗಾರಿಕೆಗಳೊಂದಿಗೆ ಮಾಡಿಕೊಳ್ಳುವ ಎಂ.ಒ.ಯು ಗಳಿಗೆ ಸಹಿ ಹಾಕತಕ್ಕದ್ದು. ಎಲ್ಲಾ ಎಂ.ಒ.ಯು ಗಳು ಸಾರ್ವಜನಿಕರಿಗೆ ಲಭ್ಯವಿರುವಂತೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸತಕ್ಕದ್ದು. ವಿಶ್ವವಿದ್ಯಾನಿಲಯದ ಅಸ್ತಿತ್ವದಲ್ಲಿರುವ ಎಂ.ಒ.ಯು ಗಳನ್ನು ಫಲಿತಾಂಶಕ್ಕಾಗಿ ಪುನರ್ ಪರಿಶೀಲಿಸುವುದು ಹಾಗೂ ಅವುಗಳನ್ನು ಪ್ರಕಟಿಸತಕ್ಕದ್ದು. ಮಾರ್ಚ್ 2023 ರ ವೇಳೆಗೆ ವಿದ್ಯಾರ್ಥಿಗಳ ಉದ್ಯೋಗಾವಕಾಶವನ್ನು ಹೆಚ್ಚಿಸಲು ಅಗ್ರ ಐದು ಅತಿ ಹೆಚ್ಚು ದಾಖಲಾತಿ ಕಾರ್ಯಕ್ರಮಗಳಿಗೆ ಉದ್ಯಮ ಸಂವಾದದ ಆಧಾರದ ಮೇಲೆ ಪಠ್ಯಕ್ರಮದ ಪರಿಷ್ಕರಣೆಯನ್ನು ಕೈಗೊಳ್ಳತಕ್ಕದ್ದು.

f. ವಿಶ್ವವಿದ್ಯಾಲಯದ ಅಧ್ಯಾಪಕರ ಕಾರ್ಯಕ್ಷಮತೆಯ ಕುರಿತು ಮೌಲ್ಯಮಾಪನ ಮತ್ತು ಸ್ವಯಂ ಮೌಲ್ಯಮಾಪನ ವರದಿ, ಶೈಕ್ಷಣಿಕ ಘಟಕದ ಮುಖ್ಯಸ್ಥರಿಂದ ಪ್ರತಿಕ್ರಿಯೆ, ಮೌಲ್ಯಮಾಪನ ಸಮಿತಿಯಿಂದ ಪ್ರತಿಕ್ರಿಯೆ ಸೇರಿದಂತೆ ಸೂಚಕಗಳ ಕುರಿತು ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಆಯೋಜಿಸತಕ್ಕದ್ದು. ಈ ಕುರಿತಂತೆ, ಕ್ರಮವಿಧಾನಗಳನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ರೂಪಿಸಿ ಪರಿಚಲನಗೊಳಿಸತಕ್ಕದ್ದು. ಈ ಕ್ರಮವಿಧಾನಗಳನ್ನು ಡಿಸೆಂಬರ್ ಒಳಗೆ ಎಲ್ಲಾ ಖಾಸಗಿ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳತಕ್ಕದ್ದು.

g. ಎಲ್ಲಾ ಖಾಸಗಿ ವಿಶ್ವವಿದ್ಯಾಲಯಗಳು ಕಡ್ಡಾಯವಾಗಿ NIRF-Ranking ಪ್ರಕ್ರಿಯಲ್ಲಿ ಪಾಲ್ಗೊಳ್ಳತಕ್ಕದ್ದು.

h. ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ, ಪರ್ಯಾಪ್ತ ಗ್ರಂಥಾಲಯ, ಕ್ರೀಡೆ, ಪ್ರಯೋಗಾಲಯ ಇತರೆ ಸೌಲಭ್ಯಗಳ ಲಭ್ಯತೆ ಬಗ್ಗೆ ಹಾಗೂ ಶಿಕ್ಷಣದ ಗುಣಮಟ್ಟದ ಹೊಂದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಲು ಕುಲಪತಿಗಳು, ಕುಲಸಚಿವರುಗಳು ಹಾಗೂ ಡೀನ್‌ಗಳು ವಿಶ್ವವಿದ್ಯಾಲಯದ ಪರಿವೀಕ್ಷಣೆ ಕೈಗೊಳ್ಳತಕ್ಕದ್ದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನ ಹಾಗೂ ಇತರೆ ವಿಷಯಗಳ ಕ್ರಮಕೈಗೊಂಡಿರುವ ಕುರಿತು ಪರಾಮರ್ಶಿಸತಕ್ಕದ್ದು.

i. ಮಾರ್ಚ್ ಮಾಹೆ ಪೂರ್ತಿ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು. ಈ ಕಾರ್ಯಕ್ರಮಗಳು ವಿಶೇಷ ಉಪನ್ಯಾಸಗಳು, ಚರ್ಚಾಕೂಟ,

-5

ರೂಪಕ ಕೌಶಲ್ಯ, ಸಂಗೀತ ಹಾಗೂ ಇತರೆ ಚಟುವಟಿಕೆಗಳನ್ನು ಒಳಗೊಳ್ಳಬಹುದಾಗಿರುತ್ತದೆ. ಸಾಂಸ್ಕೃತಿಕ ಹಾಗೂ ಸಾಕ್ಷರತೆ ಸಂಬಂಧಿ ಚಟುವಟಿಕೆಗಳನ್ನು ಮಾರ್ಚ್ ಮಾಹೆ ಪೂರ್ತಿ ನಡೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನಂದಕುಮಾರ್ ಬಿ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾಲಯಗಳು-2)

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ / ಆಡಿಟ್), ಕರ್ನಾಟಕ, ಬೆಂಗಳೂರು- 560 001.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ಖಾಸಗಿ ವಿಶ್ವವಿದ್ಯಾಲಯಗಳ ಕುಲಪತಿಗಳು/ ಕುಲಸಚಿವರು/ಹಣಕಾಸು ಅಧಿಕಾರಿಗಳು.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ನಂ. 30, ಪ್ರಸನ್ನ ಕುಮಾರ್ ಬ್ಲಾಕ್, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು.
5. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ ಮತ್ತು ತಾಂತ್ರಿಕ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
8. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
9. ಇ- ಸಮನ್ವಯಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ (ಜಾಲತಾಣದಲ್ಲಿ ಪ್ರಚುರಪಡಿಸುವುದು).
10. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
11. ರಕ್ಷಣಾ ಕಡತ/ಹೆಚ್ಚುವರಿ ಪ್ರತಿ.

******